ವಾರದ ಪತ್ರ

## ಒದಿಗೆ ಪ್ರಚೋದನೆ

ಚಂದನದಲ್ಲಿ ಶತಮಾನದ ಸಣ್ಣ ಕತೆಗಳು, ಕಾದಂಬರಿಗಳ ಚಿತ್ರ ರೂಪಗಳನ್ನು ‘ಕಥೆಗಾರ’ ಮತ್ತು ‘ಕಥಾ ಸರಿತ’ ಪ್ರಸಾರ ಮಾಡುತ್ತಿದೆ. ಆ ಮೂಲಕ ಕನ್ನಡದ ಉತ್ತಮ ಕಥೆಗಳನ್ನು ಕಾದಂಬರಿಗಳನ್ನು ಪರಿಚಯಿಸುವ ಮತ್ತು ಕನ್ನಡದ ಕಥಾ ಸಾಹಿತ್ಯವನ್ನು ಓದುಗರ ಮುಂದೆ ತೆರೆದಿಡುವ ಉತ್ತಮ ಪ್ರಯತ್ನ ಮಾಡುತ್ತಿದೆ.

ಇತ್ತೀಚೆಗೆ ತೇಜಸ್ವಿ ಅವರ ‘ಚಿದಂಬರ ರಹಸ್ಯ’ವನ್ನು ಚಿತ್ರರೂಪದಲ್ಲಿ ಪ್ರಸಾರ ಮಾಡಿತು. ಅದನ್ನು ಗಿರೀಶ್ ಕಾರ್ನಾಡ್ ನಿರ್ದೇಶಿಸಿದ್ದಾರೆ. ಕಾದಂಬರಿಯ ಚಿತ್ರಕಥೆಯನ್ನು ಅಚ್ಚುಕಟ್ಟಾಗಿ ನಿರೂಪಿಸಿ ಚಿತ್ರಿಸಿದ್ದಾರೆ. ಕಾದಂಬರಿಯಲ್ಲಿ ಚಿತ್ರಿತವಾಗಿರುವ ಕಾಡು ಮೇಡು. ಪ್ರಾಣಿ–ಪಕ್ಷಿ ಸಂಕುಲ, ಹಳ್ಳಿಗಳ ಜೀವನ ಕ್ರಮ ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಏಲಕ್ಕಿ ಧಾರಣೆ ಕುಸಿದ ಸಂದರ್ಭದಲ್ಲಿ ಕೇಸೂರಿನಲ್ಲಿ ಹಲವಾರು ಸಾಂದರ್ಭಿಕ ಘಟನೆಗಳು ನಡೆದು ಕೋಮು ದಳ್ಳುರಿ, ರಾಜಕಾರಣಗಳ ಮಧ್ಯೆ ಪ್ರೇಮ ಅರಳುವ ಸನ್ನಿವೇಶಗಳನ್ನು ಬಹಳ ಚೆನ್ನಾಗಿ ಚಿತ್ರಿಸಲಾಗಿದೆ.

—ಕೆ.ಪಿ. ರಾಮಗುಂಡಿ ಬೈಲಹೊಂಗಲ

## ಓದಿ ಹೇಳಲಿ

ವೀಕ್ಷಕರ ಮೆಚ್ಚುಗೆಯ ‘ಚಂದನ ವಾಹಿನಿ’ಯ ವಾರ್ತೆಯಲ್ಲಿ ಜಿಲ್ಲಾವಾರು ಎಷ್ಟು ಕೋವಿಡ್ ಪ್ರಕರಣಗಳು ವರದಿಯಾಗಿವೆ ಕ್ಷಣ ಕಾಲ ತೋರಿಸುತ್ತಿದ್ದಾರೆ. ಓದಿ ಹೇಳುತ್ತಿಲ್ಲ ಇದರಿಂದಾಗಿ ಆಸಕ್ತಿ ಉಳ್ಳ ವೀಕ್ಷಕರಿಗೆ ಅವರವರ ಜಿಲ್ಲೆಯ ಅಂಕಿ ಅಂಶಗಳನ್ನು ಸಹ ಓದಿ, ತಿಳಿಯಲು ಕಾಲಾವಕಾಶ ಸಿಗದೇ, ವಿವರದ ತಿಳಿವಳಿಕೆ ಆಗುತ್ತಿಲ್ಲ. ಕಾರಣ ದಯಮಾಡಿ ಇನ್ನು ಮುಂದೆ ಜಿಲ್ಲಾವಾರು ವಿವರಗಳನ್ನು ಸಹ ಓದಿ ಹೇಳಲಿ, ಎಂದು ಆಸಕ್ತ ವೀಕ್ಷಕ ಪರವಾಗಿ ಕೋರಿಕೆ.

—ನಾರಾಯಣ ಯಾಜಿ ಶಿರಾಲಿ

## ರಿಮೋಟ್ ನಿಮ್ಮ ಕೈಯಲ್ಲೇ ಇದೆ

ಧಾರಾವಾಹಿ ಸರಿಯಿಲ್ಲ, ಅದು ಹೀಗಾಗಬೇಕಿತ್ತು ಎಂದು ಅನೇಕರು ಚಡಪಡಿಸುತ್ತಿರುವುದನ್ನು ನೋಡುತ್ತಿರುತ್ತೇವೆ. ಅವರಿಗೆಲ್ಲಾ ಒಂದು ಮಾತು. ‘ ಧಾರಾವಾಹಿ ನಿರ್ಮಾಪಕ / ನಿರ್ದೇಶಕನ ಕೂಸು.. ಅವರು ಇಷ್ಟಪಟ್ಟಂತೆ ಮಾಡುತ್ತಾರೆ. ನಿಮ್ಮಗಿಷ್ಟವಾದರೆ ನೋಡಿ. ಇಲ್ಲವೋ...TV ನಿಮ್ಮದು, Remote ನಿಮ್ಮ ಕೈಲಿದೆ. ಮನಸ್ಸು ಹಗುರ ಮಾಡಿಕೊಳ್ಳಲು ನೂರಾರು ದಾರಿಗಳಿವೆ... ನೀವು ನೋಡುವುದು ನಿಲ್ಲಿಸಿದರೆ ಅಂತಹ ಧಾರಾವಾಹಿಗಳು ತಮ್ಮಷ್ಟಕ್ಕೆ ತಾವೇ ನಿಂತು ಹೋಗುತ್ತವೆ. ಮುಂದೆ ಅಂತಹವುಗಳು ಬರುವುದೂ ಕಡಿಮೆ ಆಗುತ್ತವೆ’.

—ರಾಮಸ್ವಾಮಿ ಭೀಮನಕಟ್ಟೆ, ಬೆಂಗಳೂರು

## ವಿದ್ಯಾರ್ಥಿಗಳನ್ನು ಮರೆತೀರಾ?

ಕೊರೊನಾ ಮತ್ತು ಬೇಸಿಗೆ ರಜೆಯಿಂದ ವಿದ್ಯಾರ್ಥಿಗಳು ಮನೆಯಲ್ಲಿಯೇ ಇರುತ್ತಾರೆ. ನೆಂಟರ ಮನೆಗೆ ಹೋಗಿ ರಜೆಯನ್ನು ಕಳೆಯುವ ಸ್ಥಿತಿ ಈಗ ಇಲ್ಲ. ಹೊರಗಡೆ ಹೋಗಲೂ ಆಗದೆ ಮೂರೂ ಹೊತ್ತು ಮನೆಯಲ್ಲಿಯೇ ಇರಬೇಕಾಗಿದೆ. ಸಹಪಾಠಿಗಳನ್ನು, ಸ್ನೇಹಿತರನ್ನು ಭೇಟಿಯಾಗುವಂತೆಯೂ ಇಲ್ಲ. ಸದಾ ಓದುತ್ತಾ ಸಮಯ ಕಳೆಯುವ ಸಂದರ್ಭದಲ್ಲಿ ಮನರಂಜನೆ ಅನಿವಾರ್ಯವಾಗಿದೆ. ವಿದ್ಯಾರ್ಥಿಗಳಿಗೆ ಇಷ್ಟವಾಗುವಂತಹ ಕಾರ್ಯಕ್ರಮಗಳು ಟೀವಿಯಲ್ಲಿ ಅಷ್ಟು ಪ್ರಸಾರ ಮಾಡುತ್ತಿಲ್ಲ. ಇನ್ನಾದರೂ ಮಕ್ಕಳಿಗೆ ಮೆಚ್ಚುಗೆ ಆಗುವಂತ ಕಾರ್ಯಕ್ರಮಗಳನ್ನು ನಿರೀಕ್ಷಿಸಬಹುದಾ?

—ವಿ. ಹೇಮಂತ ಕುಮಾರ್, ಬೆಂಗಳೂರು

## ಹೂ ಮಳೆ ಭಿನ್ನ

ಕಲರ್ಸ್ ಕನ್ನಡದ ಧಾರಾವಾಹಿಗಳಲ್ಲಿ ಹಿಂಸೆ ಬಡಿದಾಟ ಅತ್ತೆ–ಸೊಸೆಯರ ಕಿತ್ತಾಟ ಮತ್ತು ದ್ವೇಷಗಳನ್ನೆ ಬಿಂಬಿಸುತ್ತಿರುವುದು ಮಾಮೂಲಾಗಿದೆ. ಆದರೆ ‘ಹೂಮಳೆ’ ಆ ಆರೋಪಕ್ಕೆ ಹೊರತಾಗಿದೆ. ಅದರಲ್ಲಿ ಕ್ರೌರ್ಯದ ದೃಶ್ಯಗಳು ಪ್ರಸಾರವಾಗುತ್ತಿಲ್ಲ. ಸಂಜೆ ಮನೆಗೆ ಬಂದು ಖುಷಿಯಿಂದ ನೋಡಬಹುದು. ಬಾಲನಟನಾಗಿ ಇಶಾಂತ್ ತುಂಬಾ ಚೆನ್ನಾಗಿ ಅಭಿನಯಿಸಿದ್ದಾನೆ.

—ಎನ್. ವೈದೇಹಿ, ಮೈಸೂರು

## ಪ್ರೇಮ (ನಿ)ವೇದನೆ

ಝೀ ಕನ್ನಡದ ‘ಗಟ್ಟಿಮೇಳ’ ಬರ್ತಾ ಬರ್ತಾ ‘ಖೊಟ್ಟಿ ಮೇಳ’ ಆಗ್ತಾ ಇದೆ. ವೇದಾಂತ್ ಅಮೂಲ್ಯರ ಪ್ರೇಮ ಪ್ರಸಂಗವನ್ನು ಹಿಗ್ಗಾ ಮುಗ್ಗಾ ಎಳೆಯುತ್ತಿದ್ದಾರೆ. ಪ್ರೇಮ ನಿವೇದನೆಯೇ ನೂರಾರು ಕಂತು ನುಂಗಿದೆ. ಕಡೆಗೆ ಅಮರ ಪ್ರೇಮ ಸ್ಮಾರಕ ‘ತಾಜ್ ಮಹಲ್’ ಸಮ್ಮುಖ ನಿವೇದನೆ ಮಾಡಿಸಿದರೂ ಮದುವೆಗೆ ನೂರೆಂಟು ವಿಘ್ನಗಳು ಬರುತ್ತಿವೆ. ಅಲ್ಲಿ ಒಪ್ಪಿದ್ದ ಪರಿಮಳಾ ಮತ್ತೆ ಮದುವೆ ನಿರಾಕರಿಸುತ್ತಾಳೆ. ಹೀಗೇ ಆದರೆ ಉಳಿದ ಇಬ್ಬರು ಹೆಣ್ಣುಮಕ್ಕಳು ತಾಳಿ ಭಾಗ್ಯಕ್ಕಾಗಿ ಇನ್ನೆಷ್ಟು ವರ್ಷ ಕಾಯಬೇಕಾಗಬಹುದು. ಮೊನ್ನೆ ಅಮೂಲ್ಯಾಳಿಗೆ ಗಂಡು ವೇಷ ತೊಡಿಸಿ ಅಮೂಲ್ಯೆಶ್ ಮಾಡಿ ವರ ಪರೀಕ್ಷೆಯೂ ನಡೆಯಿತು. ಒಂದುವೇಳೆ ಕತೆ ಇಲ್ಲದಿದ್ದರೆ ಕಂತುಗಳನ್ನು ಅನವಶ್ಯಕವಾಗಿ ಹಿಗ್ಗಿಸಿ ಪ್ರೇಕ್ಷಕರಿಗೆ ವೇದನೆ ಕೊಡುವುದಕ್ಕಿಂತ ಗಟ್ಟಿಮೇಳವನ್ನು ಬೇಗ ಬಾರಿಸಿ ಮುಗಿಸುವುದು ಒಳ್ಳೆಯದು.

—ವಾ. ಮುರಳೀಧರ, ತೀರ್ಥಹಳ್ಳಿ

## ಹೊಸ ಧಾರಾವಾಹಿ ಬರಲಿ

ಸ್ಟಾರ್ ಸುವರ್ಣದ ‘ಮುದ್ದುಲಕ್ಷ್ಮಿ’ ಅತೀ ಎನಿಸುತ್ತಿದೆ. ಇಬ್ಬರು ಹೆಣ್ಣುಮಕ್ಕಳು ತಾಯಿ ತಂದೆಗಾಗಿ ಪರಿತಪಿಸುವುದು, ಮಕ್ಕಳ ಬಾಯಲ್ಲಿ ಅನಾಥೆ ಎಂಬ ಪದವನ್ನು ಪದೆ ಪದೇ ಹೇಳಿರುವುದು. ಅನವಶ್ಯಕ ಬೇರೆ ಪಾತ್ರ ತುಂಬಿ ಸಂಚಿಕೆಯನ್ನು ಎಳೆಯುತ್ತಿರುವರು. ನೋಡುಗರಿಗೆ ಈಗಾಗ್ಲೆ ಅಂತ್ಯ ತಿಳಿದಿದೆ. ಬೇಗ ಮುಗಿಸಿ ಹೊಸತೊಂದು ಉತ್ತಮ ಧಾರಾವಾಹಿ ಬರಲೆಂದು ಆಶಿಸುವೆ.

—ಅಂಚೆ ಸುಬ್ರಹ್ಮಣ್ಯ

## ಕಂತಿಗೆ ಮಿತಿ ಇರಲಿ

ದೂರದರ್ಶನ (ಡಿಡಿ) ಒಂದೇ ಇದ್ದ ದಿನಗಳಲ್ಲಿ ಧಾರಾವಾಹಿಗಳಿಗೆ ಗರಿಷ್ಠ 13 ಕಂತುಗಳ ಮಿತಿ ಇತ್ತು. ಧಾರಾವಾಹಿ ನಿರ್ಮಾಪಕರು ಆ ಮಿತಿಯಲ್ಲೇ ತಮ್ಮ ಧಾರಾವಾಹಿಯನ್ನು ಮುಗಿಸುತ್ತಿದ್ದರು. ಹೇಳಬೇಕಾಗಿದ್ದ ಸಂಗತಿಗೆ ಯಾವುದೇ ಅಡ್ಡಿಯಾಗದಂತೆ ಹೇಳುತ್ತಿದ್ದರು. ರಾಮಾಯಣ ಮತ್ತು ಮಹಾಭಾರತದಂತಹ ಬೃಹತ್ ಕಥೆಗಳೂ ನಿಯಮಿತ ಕ್ರಿಕೆಟ್ ಪಂದ್ಯದಂತೆ ಮುಗಿಯುತ್ತಿದ್ದವು. ಅಂದು ಧಾರಾವಾಹಿ ಇಷ್ಟು ಬೇಗ ಮುಗೀತಾ...? ಎಂದು ಬೇಸರದಿಂದ ಕೇಳುತ್ತಿದ್ದ ವೀಕ್ಷಕರು, ಇಂದು ಇನ್ನೂ ಮುಗಿಲಿಲ್ವಾ? ಎಂದು ಕೇಳುತ್ತಿದ್ದಾರೆ. ಧಾರಾವಾಹಿಗಳನ್ನು ಚ್ಯೂಯಿಂಗ್‌ಗಮ್‌ನಂತೆ ಎಳೆಯುವುದರಿಂದ ಹೊಸ ಪ್ರತಿಭೆಗಳು ಅವಕಾಶ ವಂಚಿತರಾಗುತ್ತಾರೆ.

—ರಮಾನಂದ ಶರ್ಮಾ, ಬೆಂಗಳೂರು

## ಬಿಗ್ ಬಾಸ್-ಸ್ಮಾಲ್ ಬಾಸ್!

ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ‘ಬಿಗ್ ಬಾಸ್’ ಎಂಟನೇ ಸರಣಿ ಸಮರ್ಥವಾಗಿ ಪ್ರೇಕ್ಷಕರನ್ನು ಸೆರೆ ಹಿಡಿದಿತ್ತು. ನಿರೂಪಕ ನಟ ಸುದೀಪ್ ಇದರ ದೊಡ್ಡ ಆಕರ್ಷಣೆ. ಪ್ರೇಕ್ಷಕರು ಶನಿವಾರ ಮತ್ತು ರವಿವಾರ ಸುದೀಪ್ ನಡೆಸಿ ಕೊಡುವ ಪಂಚಾಯತಿ ನೋಡಲು ಕಾತುರರಾಗಿ ಕಾಯುತ್ತಿದ್ದರು. ಅವರು ಬಾರದೇ ಈಗ ಎರಡುವಾರ ಕಳೆದಿದೆ. ಅದು ನಮ್ಮಲ್ಲಿ ಒಂದು ರೀತಿಯ ನಿರಾಶಾಭಾವನೆ ಮೂಡಿಸಿದೆ. ಬಿಗ್ ಬಾಸ್ ವೇದಿಕೆಯಲ್ಲಿ ಸುದೀಪ್ ‘ಸ್ಮಾಲ್ ಬಾಸ್’ ಎನ್ನುವಂತಾಗಿದೆ. ಆದರೂ ಅವರಿಲ್ಲದ ಸಮಯವನ್ನು ತುಂಬಲು ಬಿಗ್ ಬಾಸ್ ಮಾಡಿದ ಪ್ರಯತ್ನ ಶ್ಲಾಘನೀಯ. ಸುದೀಪ್ ಬೇಗ ಬರುವಂತಾಗಲಿ.

—ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ